
ಎನ್. ಜಗನ್ನಾಥ ಪ್ರಕಾಶ್

# ಹೊಸ ಹಾದಿಯ ಹರಿಕಾರ
# ಬಿ.ವಿ. ಕಾರಂತ



ಭಜನೆ, ವೃತ್ತಿರಂಗಭೂಮಿ ಮೂಲಕ ಹಾದು ಆಧುನಿಕ ರಂಗಭೂಮಿಯಲ್ಲಿ ಹೊಸ ಹಾದಿಗೆ ನಾಂದಿ ಹಾಡಿದದವರು ಬಿ.ವಿ. ಕಾರಂತರು

ಅಭಿನಯ, ಗಾಯನ, ಸಂಗೀತ ಸಂಯೋಜಕ, ನಾಟಕ ನಿರ್ದೇಶನ, ರಂಗ ಆಡಳಿತ–ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮದೇ ಛಾಪು ಮೂಡಿಸಿದ ಬಿ.ವಿ. ಕಾರಂತರು ಹುಟ್ಟಿ ಬೆಳೆದಿದ್ದು ದಕ್ಷಿಣ ಕನ್ನಡ ಜಿಲ್ಲೆಯ 'ಮಂಚಿ' ಎಂಬ ಹಳ್ಳಿಯಲ್ಲಿ.

ಗ್ರಾಮದಲ್ಲಿದ್ದ ಸಾಂಸ್ಕೃತಿಕ ಪರಿಸರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದ ಕಾರಂತರು ಪ್ರಾಥಮಿಕ ಶಾಲೆಯಲ್ಲಿಯೇ ನಾಟಕಗಳಲ್ಲಿ ಪಾತ್ರವಹಿಸಲಾರಂಭಿಸಿದ್ದರು. ಪುಟ್ಟ ಪುಟ್ಟ ಪಾತ್ರಗಳಿಂದ ಗಮನ ಸೆಳೆದು ಹಳ್ಳಿ ಪಟೇಲರಿಂದ ಇನಾಮು ಪಡೆದಿದ್ದ ಕಾರಂತರು ಓದುವುದನ್ನು ಬಿಡಲಿಲ್ಲ. ಜೊತೆಗೆ ಸಂಗೀತ ಕಲಿಯುವುದನ್ನು ಮರೆಯಲಿಲ್ಲ.

ಗುಬ್ಬಿ ಕಂಪೆನಿಯ 'ಕೃಷ್ಣಲೀಲಾ' ನಾಟಕವನ್ನು ಮಂಗಳೂರಿನಲ್ಲಿ ನೋಡಿದ ಕಾರಂತ ಮನೆಬಿಟ್ಟು ಸೇರಿದ್ದು ಅದೇ ಪ್ರಖ್ಯಾತ ಗುಬ್ಬಿ ಕಂಪೆನಿಯನ್ನ. ಎಳೆಯ ವಯಸ್ಸಿನಲ್ಲಿಯೇ ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದ ಗುಬ್ಬಿ ವೀರಣ್ಣನವರು ತಮ್ಮ ಕಣ್ಣಿಗೆ ಬಿದ್ದ ಬಿ.ವಿ. ಕಾರಂತರನ್ನು ಕಾಶಿಗೆ ಕಲಾಪ್ರಕಾರದಲ್ಲಿ ಪದವಿ ಗಳಿಸಲು ಕಳಿಸಿದರು.

ಬನಾರಸ್‌ನಲ್ಲಿ ಸ್ನಾತಕ ಪದವಿಯೊಂದಿಗೆ ಹಿಂದೂಸ್ತಾನಿ ಸಂಗೀತದಲ್ಲಿ ಗುರು ಓಂಕಾರನಾಥರಿಂದ ಶಿಕ್ಷಣ ಪಡೆದ ಕಾರಂತರು ನಂತರ ರಾಷ್ಟ್ರೀಯ ನಾಟಕ ಶಾಲೆಯಲ್ಲೂ ಪದವಿ ಪಡೆದರು. ಬೆಂಗಳೂರಿನಲ್ಲಿ 'ಬೆನಕ' (ಬೆಂಗಳೂರು ನಗರ ಕಲಾವಿದರು) ತಂಡದಲ್ಲಿ ಸಕ್ರಿಯರಾಗಿದ್ದು ಅನೇಕ ಪ್ರತಿಭೆಗಳನ್ನು ಬೆಳಕಿಗೆ ತಂದ ಅವರು ದೆಹಲಿಯ ಸರ್ದಾರ್ ಪಟೇಲ್ ವಿದ್ಯಾಲಯದಲ್ಲಿ ನಾಟಕ ಶಿಕ್ಷಕರಾಗಿ ಕೆಲಸ ಮಾಡಿ ಬಳಿಕ ತಾವು ಕಲಿತ ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು.

ಭಾರತದ ವೈವಿಧ್ಯ ರಂಗ ಚಟುವಟಿಕೆಗಳ ಬಗೆಗೆ ಅಧ್ಯಯನ ಮಾಡಿದ್ದ ಕಾರಂತರು ರಾಷ್ಟ್ರೀಯ ನಾಟಕ ಶಾಲೆಯ ಮೂಲಕ ದೇಶದುದ್ದಕ್ಕೂ ರಂಗಭೂಮಿಯನ್ನು ಹೊಸ ಪಥದಲ್ಲಿ ಕೊಂಡೊಯ್ಯಲು ಶ್ರಮವಹಿಸಿದರು. ಪ್ರಾದೇಶಿಕ ರಂಗ ಚಟುವಟಿಕೆಗಳಿಗೆ ನವ ಚೈತನ್ಯ ತುಂಬಿದ್ದು ಅವರ ಇನ್ನೊಂದು ಮಹತ್ವದ ಕೊಡುಗೆ.

ನಾಟಕಗಳ ನಿರ್ದೇಶನದೊಟ್ಟಿಗೆ ಅದಕ್ಕೆ ಅರ್ಥಪೂರ್ಣ ಸಂಗೀತ ಸಂಯೋಜನೆ ಮಾಡುವುದು ಕಾರಂತರ ಹೆಚ್ಚುಗಾರಿಕೆ. ಆಗ ಅವರಿಗೆ ನೆರವಾಗಿದ್ದು ಅವರು ಬಾಲ್ಯದಲ್ಲಿ ಕಂಡಿದ್ದ ಕೇಳಿದ್ದ